# ಹುಲಿ 2

■ ಹೊರೆಯಾಲ ದೊರೆಸ್ವಾಮಿ

ಹುಲಿಯೆ ಹುಲಿಯೆ ಎಲ್ಲಿರುವೆ
ಹುಡುಕಿದರೆಲ್ಲು ಕಾಣದೆ ಇರುವೆ
ಕಾಡಿನ ಒಳಗಡೆ ಅಡಗಿದೆ ಏನು
ಪೊದೆಯೊಳಗಲ್ಲೇ ಅವಿತಿಹೆ ಏನು?

ಪಟ್ಟೆಯ ಚರ್ಮವ ನೀ ಹೊಂದಿರುವೆ
ಚಿಟ್ಟೆಯ ಬಣ್ಣದ ಹೊಳಪಲಿ ಮಿಂಚುವೆ
ಸುಂದರ ಪಂಜರ ಊರುತ ನೀನು
ಚಂದದ ಕಾಡನು ಸುತ್ತುವೆ ಏನು?

ನಿನ್ನಯ ಗುಟುರಿಗೆ ಬೆಚ್ಚುತ ಬೆದರಿ
ಜಿಂಕೆ ಮೊಲಗಳು ಬೆದರುವುವು
ನಿನ್ನಯ ಘರ್ಜನೆ ಕೇಳಿದರಂತು
ಮೃಗಗಳ ಎದೆಯೇ ಒಡೆಯುವುದು

ಆದರು ಬೇಟೆಯ ವಂಚಕ ಜನರು
ನಿನ್ನನು ಕೊಲ್ಲುತ ಬಂದಿಹರು
ನಿನ್ನುಗರನು ಕಿತ್ತು ಚರ್ಮವ ಮಾರಿ
ದುರಾಸೆ ಹಣವನು ಗಳಿಸುವರು

ಅವರಿಗೆ ಹೆದರಿ ಕೋವಿಗೆ ಬೆದರಿ
ಮೆಳೆಗಿಡದಲ್ಲೇ ಅಡಗಿದೆಯ?
ದುರ್ಜನ ಮನಸಿನ ದುಷ್ಟರ ಬೇಟೆಗೆ
ಹೆದರುತ ಜೀವವ ಹಿಡಿದಿಹೆಯ?



ಚಿತ್ರ: ಮಂಜುನಾಥ್ ಕುಲಕೊಪ್ಪದ



ಚಿತ್ರ: ಮಂಜುನಾಥ್ ಕುಲಕೊಪ್ಪದ

# ಆಗಸ ಅಂಗಳ

■ ಚಂದ್ರಗೌಡ ಕುಲಕರ್ಣಿ, ತಾಳಿಕೋಟೆ

ಆಗಸ ತಾಯಿ ಆಡಲು ಬಿಟ್ಟಳು
ಅಂತ್ಯವು ಇಲ್ಲದ ಬಯಲಲ್ಲಿ !
ಕುಣಿದು ಕುಣಿದು ಕಪ್ಪಳಿಸಿದವು
ಚುಕ್ಕೆಗಳೆಲ್ಲ ನಗೆ ಚೆಲ್ಲಿ !
ಮನೆಯೊಳಗಿರುವ ಮಕ್ಕಳನೆಲ್ಲ
ಹೊರಗೆ ಕರೆದವು ಕೈಮಾಡಿ !
ಹೊಸ್ತಿಲ ದಾಟುತ ಅಂಗಳಕಿಳಿದರು
ತುಂಟ ಪುಟಾಣಿಗಳೋಡೋಡಿ !
ಚುಕ್ಕೆಯ ಬಳಗವ ಮೀರಿಸಿ ಬಿಟ್ಟಿತು
ಮಕ್ಕಳ ದಂಡು ಅಂಗಳದಿ !
ಒಂದೇ ಕ್ಷಣದಲಿ ವ್ಯಾಪಿಸಿಬಿಟ್ಟಿತು
ಕಿಲಕಿಲ ನಗುವು ಆದಸದಿ !
ಲೋಕದ ಜನರಿಗೆ ಬೆರಗನು ನೀಡಿತು
ಆಗಸ ಅಂಗಳ ಒಂಗಾಗಿ !
ನೆಲದಲಿ ಮುಗಿಲು ಮುಗಿಲಲಿ ಅಂಗಳ
ಪ್ರತಿಬಿಂಬಿಸಿದವು ಚಂದಾಗಿ !